ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮೇ 2020

ಸಪ್ತಗಿರಿ ಅನುಬಂಧ




## ಪ್ರಹ್ಲಾದವರದ ನರಸಿಂಹ



ಬ್ರಹ್ಮೋತ್ಸವದಲ್ಲಿ ಬಾಲಕೃಷ್ಣನು

ತಿರುಮಲ ತಿರುಪತಿ ದೇವಸ್ಥಾನಗಳು



# ಬಾಲ ಸಪ್ತಗಿರಿ

"ಸಪ್ತಗಿರಿ" ಅನುಬಂಧ

ಸಂಪುಟ - 01 ಮೇ 2020 ಸಂಚಿಕೆ - 03

## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ಕೂರ್ಮಾವತಾರ<br>-ಶ್ರೀಮತಿ. ಬಿ. ಪದ್ಮಜ | 04 |
| ಹನ್ನೆರಡು ಆಳ್ವಾರರು | ಪೇಯಾಳ್ವಾರ್<br>- ಎ. ವೀರರಾಘವನ್ | 06 |
| ಕನ್ನಡ ಹರಿದಾಸವರೇಣ್ಯರು | ವ್ಯಾಸರಾಜರು<br>- ಶ್ರೀಮತಿ. ಸುಧಾಮಧುಸೂದನ್ | 08 |
| ಚಿತ್ರಕಥೆ | ಅಭಿಷೇಕಕ್ಕೆ ಆಕಾಶಗಂಗೆ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಕೆ. ದ್ವಾರಕನಾಥ್ | 10 |
| ಬಾಲನೀತಿ | ಕೋಪ ಮತ್ತು ತಾಳ್ಮೆ<br>- ಬಿ. ಆರ್. ಶ್ರೀಕಂಠಯ್ಯ | 14 |
| ಪ್ರಜ್ಞಾವಂತ ಬಾಲಕ | | 16 |
| ಕ್ವಿಜ್ | - ಶ್ರೀಮತಿ. ಸೂರ್ಯವಂಶಿ | 17 |
| ಚಿತ್ರಲೇಖನ | | 18 |


ಮುಖಚಿತ್ರ - ಪ್ರಹ್ಲಾದವರದ ನರಸಿಂಹ

ಹಿಂಬದಿಚಿತ್ರ - ಸೀತಾಶೋಕನಿವಾರಕ ಹನುಮಂತ

# ಕೂರ್ಮಾವತಾರ

-ಶ್ರೀಮತಿ ಬಿ. ಪದ್ಮಜ


ವಿಷ್ಣುವಿನ ದಶಾವತಾರಗಳಲ್ಲಿ ಕೂರ್ಮಾವತಾರವು ಎರಡನೆಯ ಅವತಾರವಾಗಿದೆ. ಈ ಅವತಾರದಲ್ಲಿ ಮಹಾವಿಷ್ಣುವು ದೇವತೆಗಳಿಗೆ ಅನೇಕ ರೀತಿಯಲ್ಲಿ ನೆರವಿಗೆ ಬಂದು, ಕ್ಷೀರಸಾಗರಮಥನದ ಕಾರ್ಯದಲ್ಲಿ ಸಹಾಯಕನಾಗಿದ್ದಾನೆ.


ಒಮ್ಮೆ ದೇವತೆಗಳು ದೈತ್ಯರಿಂದ ಸೋತು ಸ್ವರ್ಗಲೋಕವನ್ನು ಅವರಿಗೆ ಒಪ್ಪಿಸಿ ತಲೆ ಮರೆಸಿಕೊಂಡಿದ್ದರು. ಆಗ ಬಲಿ ಚಕ್ರವರ್ತಿಯು ದೇವೇಂದ್ರನ ಸಿಂಹಾಸನವನ್ನು ಏರಿದ್ದ. ಶುಕ್ರಾಚಾರ್ಯರು ಅವನ ಗುರುಗಳಾಗಿದ್ದರು. ಸ್ವರ್ಗಲೋಕದ ರಾಜನಾದ ದೇವೇಂದ್ರನು ತಮ್ಮ ಗುರುಗಳಾದ ಬೃಹಸ್ಪತಿಗಳ ಬಳಿ ಸಮಾಲೋಚನೆ ನಡೆಸಿದರು. ಆಗ ಅವರು ಇಂತಹಾ ಕಷ್ಟಕರವಾದ ಪರಿಸ್ಥಿತಿಯಲ್ಲಿ ಪುನಃ ಯುದ್ಧಮಾಡುವುದು ಸರಿಯಲ್ಲವೆಂದು ದಾನವರೊಂದಿಗೆ ಸಂಧಾನ ಮಾಡಿಕೊಂಡು, ಇಬ್ಬರೂ ಸೇರಿ ಕ್ಷೀರಸಾಗರ ಮಥನ ಮಾಡುವುದಕ್ಕೆ ಒಪ್ಪಿಸಬೇಕೆಂದು ಹೇಳಿದರು.

ದೇವೇಂದ್ರನು ತಮ್ಮ ಗುರುಗಳ ಮಾತಿನಂತೆ ದಾನವರ ಬಳಿಗೆ ತಮ್ಮ ಪರಿವಾರದೊಂದಿಗೆ ಬಲಿಯ ಬಳಿ ಮಾತನಾಡಲು ಬಂದ. ಆಗ ಬಲಿಯ ಜೊತೆಗಿದ್ದ ದಾನವರು ಪುನಃ ದೇವತೆಗಳ ಮೇಲೆ ಯುದ್ಧಕ್ಕೆ ಹೊರಟಾಗ ಬಲಿ ಅವರನ್ನು ತಡೆದು, ಸಮಾಧಾನದಿಂದ ಮಾತನಾಡಿಸಿ, ಅವರೆಲ್ಲ ತನ್ನನ್ನು ನೋಡ ಬಂದಿರುವ ಕಾರಣವೇನೆಂದು ಕೇಳಿದ.

ಆಗ ದೇವೇಂದ್ರನು ಬಲಿಗೆ ಎಲ್ಲಾ ವಿಷಯಗಳನ್ನು ತಿಳಿಸಿ, ಕ್ಷೀರ ಸಾಗರ ಮಥನ ಮಾಡಿದರೆ ಅಮೃತವು ದೊರೆಯುವುದೆಂದೂ ಅದನ್ನು ಇಬ್ಬರೂ ಹಂಚಿಕೊಳ್ಳೋಣವೆಂದು ಹೇಳಿದ. ಆಗ ಬಳಿ ತನ್ನ ಒಪ್ಪಿಗೆ ನೀಡಿದ.

ಆದರೆ ಕ್ಷೀರಸಾಗರವನ್ನು ಮಥನ ಮಾಡಬೇಕೆಂದರೆ ಕಡಗೋಲನ್ನಾಗಿ ಮಂದರ ಪರ್ವತವನ್ನು, ಹಾಗೂ ಸರ್ಪ ರಾಜನಾದ ವಾಸುಕಿಯನ್ನು ಹಗ್ಗವನ್ನಾಗಿ ಬಳಸಿಕೊಳ್ಳಬೇಕೆಂದು ನಿರ್ಧರಿಸಿದರು. ಕೂಡಲೇ ವಾಸುಕಿಯ ಪಾರ್ಥನೆ ಮಾಡಿದರು. ವಾಸುಕಿ ಅವರ ಕೆಲಸಕ್ಕೆ ಒಪ್ಪಿಗೆ ನೀಡಿದ. ಆದರೆ ಅತಿ ದೊಡ್ಡದಾದ ಮಂದರ ಪರ್ವತವನ್ನು ಯಾವ ರೀತಿ ಸಮುದ್ರದ ಬಳಿಗೆ ತರಬೇಕೆಂದು






ಯೋಚಿಸಿದಾಗ, ಪುನಃ ಮಹಾವಿಷ್ಣುವೇ ಗರುಡಾ ಗಮನನಾಗಿ ಬಂದು ಪರ್ವತವನ್ನು ಹೊತ್ತು ತಂದು ಸಮುದ್ರದ ನಡುವೆ ಇರಿಸಿದ.ಇದನ್ನು ನೋಡಿ ಸಂತೋಷಗೊಂಡ ದೇವತೆಗಳು. ದಾನವರು ಇಬ್ಬರೂ ಸೇರಿ ಸಮುದ್ರವನ್ನು ಕಡೆಯ ಲಾರಂಭಿಸಿದರು.ಸಾಗರವನ್ನು ಕಡೆಯು ತ್ತಿದ್ದಂತೆಯೇ ಮಂದರ ಪರ್ವತವು ನೀರಿ ನಲ್ಲಿ ಮುಳುಗಲಾರಂಭಿಸಿತು. ಆಗ ದೇವತೆ ಗಳು, ದಾನವರು ಹತಾಶರಾದರು. ಆಗಲೂ ಮಹಾವಿಷ್ಣುವೇ ಕೂರ್ಮಾವಾತಾರವನ್ನು ಧರಿಸಿ, ತನ್ನ ಬೆನ್ನ ಮೇಲೆ ಮಂದರ ಪರ್ವತವನ್ನು ಧರಿಸಿದನು. ಪುನಃ ಕ್ಷೀರಸಾಗರಮಥನ ಆರಂಭವಾಯಿತು. ದೇವತೆಗಳು, ಕೂರ್ಮನ ಬೆನ್ನು ಬಹಳ ನೋಯುತ್ತಿದೆಯೇನೋ ಎಂದು ಭಯಗೊಂಡರು. ಆದರೇ ಕೂರ್ಮಾವತಾರವನ್ನು ಧರಿಸಿದ ಭಗವಂತನಿಗೆ, ಯಾರೋ ತನ್ನ ಬೆನ್ನನ್ನು ಕರೆಯುತ್ತಿದ್ದಂತೆ ಭಾಸವಾಗಿ ಸಂತೋಷದಿಂದ ಪರ್ವತದ ಭಾರವನ್ನು ಹೊತ್ತು ಕೊಂಡ.ವಾಸುಕಿಯೂ ಸಹ ತನ್ನ ಮಾಯ ನ್ನೆಲ್ಲಾ ನೋಯುತ್ತಿದ್ದರು ದೇವತೆಗಳಿಗೆ ದಾನವರಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಅವನ್ನೆಲ್ಲಾ ಸಹಿಸಿ ಕೊಂಡ.

ನಂತರ ಕ್ಷೀರಸಾಗರ ಮಥನವು ಸಾಗುತ್ತಿದ್ದಂತೆಯೇ ಸಮುದ್ರದ ಆಳದಿಂದ ಒಂದೊಂದೇ ವಸ್ತುಗಳು ಹೊರಬಂದುವು. ಮೊದಲನೆಯದಾಗಿ ಹಾಲಾಹಲ ಹೊರಬಂತು. ಅದನ್ನು ಲೋಕ ಕಲ್ಯಾಣಕ್ಕಾಗಿ ಮಹಾಶಿವನು ನುಂಗಿದ. ಆದ್ದರಿಂದಲೇ ಅವನು ನೀಲಕಂಠನೆನಿಸಿಕೊಂಡ. ನಂತರ ಕಾಮಧೇನು ಕಲ್ಪವೃಕ್ಷ ಐರಾವತ, ಪಾರಿಜಾತ ವೃಕ್ಷ ಎಲ್ಲವು ಹೊರಬಂದವು. ದಾನವರು ಅವ್ಯಾವುದನ್ನೂ ಬೇಡವೆಂದರು. ಆಗ ದೇವತೆಗಳು ಅವನ್ನೆಲ್ಲ ತಮ್ಮ ಸ್ವಂತ ಮಾಡಿಕೊಂಡರು. ಕೊನೆಯಲ್ಲಿ ಅಮೃತವು ಹೊರಬಂತು.


ಅದನ್ನು ಹಂಚುವುದಕ್ಕೂ ಜಗಳವಾದಾಗ ಪುನಃ ಮಹಾವಿಷ್ಣುವೇ ಮುಂದಾಗಿ ಮೋಹಿನಿ ಅವತಾರವನ್ನು ಧರಿಸಿ ಅಮೃತವನ್ನು ದೇವತೆಗಳಿಗೆ ಹಂಚಿಬಿಟ್ಟ.



ಕೂರ್ಮಾವತಾರವನ್ನು ಧರಿಸುವುದರ ಮೂಲಕ ಭಗವಂತನು. ಯಾವುದೇ ಸ್ವಾರ್ಥ ವಿಲ್ಲದೇ ಇತರರಿಗೆ ಸಹಾಯ ಮಾಡುವ ಬುದ್ಧಿ ಯನ್ನು ಲೋಕಕ್ಕೆಲ್ಲಾ ಸಾರಿದ.

ಆದ್ದರಿಂದ ಮಕ್ಕಳೇ ಸ್ವಾರ್ಥವನ್ನು ಬಿಟ್ಟು ಬೇರೆಯವರಿಗೆ ಒಳಿತನ್ನು ಮಾಡುವ ಬುದ್ದಿಯನ್ನು ನೀವು ಕಲಿತು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿ.





# ಶ್ರೀ ಪೇಯಾಳ್ವಾರ್

- ಎ.ವೀರರಾಘವನ್

ಆಳ್ವಾರರುಗಳು ಹನ್ನೆರಡು ಜನ. ಇವರು ಐದು ಸಾವಿರ ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಅವತರಿಸಿದ ಭಕ್ತರು. ಭಗವಂತನ ಭಕ್ತಿಯಲ್ಲಿ ಮುಳಗಿದುದರಿಂದ ಇವರಿಗೆ ಆಳ್ವಾರರುಗಳು (ಮುಳುಗಿದವರು) ಎಂದು ಹೆಸರು. ಇವರೆಲ್ಲಾ ಭಗವಂತನ ವಿವಿಧ ಆಯುಧಗಳ ರೂಪ.

ಶ್ರೀ ಪೇಯಾಳ್ವಾರವರು ಮೊದಲ ಮೂರು ಆಳ್ವಾರರುಗಳಲ್ಲಿ ಮೂರನೆಯವರು. ''ಪೇಯ್'' ಎಂದರೆ ಉನ್ಮತ್ತ (ಹುಚ್ಚು) ಎಂದು

ಅರ್ಥ. ಇವರು ಭಗವಂತನನ್ನು ಗಾಢ ಭಕ್ತಿಯಿಂದ ಹಾಡುತ್ತಾ ಹುಚ್ಚರಂತೆ ಕುಣಿಯುತ್ತಿ ದ್ದರು. ಆದುದರಿಂದ ಅವರಿಗೆ ಈ ಹೆಸರು.

ಪೇಯ್ ಆಳ್ವಾರ್ ಅವರು ಮದರಾಸಿನ ಮೈಲಾಪುರದ ಆದಿ ಕೇಶವ ಸ್ವಾಮಿ ದೇವಾಲಯದ ಸರೋವರದಲ್ಲಿ ಶಿವ್ವಲ್ಲಿ ಎಂಬ ಪುಷ್ಪದಲ್ಲಿ ತುಲಾ ಮಾಸ ಶತಭಿಷ ನಕ್ಷತ್ರದಲ್ಲಿ ಹುಟ್ಟಿಬಂದರು. ಇವರು ಭಗವಂತನ ಆಯುಧವಾದ ನಂದಕ ಸ್ವರೂಪರು.

ಆಳ್ವಾರರುಗಳು ಒಂದು ದೇವಸ್ಥಾನದಿಂದ ಮತ್ತೊಂದು ದೇವ ಸ್ಥಾನಕ್ಕೆ ಭಗವಂತನನ್ನು ಹಾಡುತ್ತಾ ಓಡಾಡುತ್ತಿದ್ದರು. ಓಮ್ಮೆ ತಿರು ಕ್ಕೋವಿಲೂರ್ ಎಂಬ ಸ್ಥಳದಲ್ಲಿ ಒಂದು ದೇವಸ್ಥಾನದ ಜಗಲಿಯಲ್ಲಿ ಮೊದಲ ಮೂರು ಆಳ್ವಾರರುಗಳು ಸೇರಿದರು. ಒಬ್ಬರಿಗೊಬ್ಬರು ಪರಿಚಯಲಿಲ್ಲ. ಜೋರು ಮಳೆ ಶುರುವಾಯಿತು. ಸ್ಥಳ ಚಿಕ್ಕದು. ಅಲ್ಲಿಯೇ ಮೂರು ಜನರೂ ನಿಂತು ಭಗವಂತನನ್ನು ಹಾಡುತ್ತಾ ನರ್ತಿಸಲು ಆರಂಭಿ ಸಿದರು. ಅವರ ಮಧ್ಯೆ ಮತ್ತೊಬ್ಬನು ಒಂದು ಅವರೊಡನೆ ನರ್ತಿಸುತ್ತಿದ್ದನು. ಅವನು ಬೇರೆ ಯಾರೂ ಅಲ್ಲ ಲಕ್ಷ್ಮೀ ನಾರಾಯಣ. ಸ್ವಾಮಿ ಇವರಿಗೆ ದಿವ್ಯ ದರ್ಶನ ನೀಡಿದನು. ಮೂರು ಜನರೂ ಆನಂದ ಪರವಶರಾಗಿ ಆ ಸ್ವಾಮಿ ಯನ್ನು ನೂರು ನೂರು ಪದ್ಯಗಳಲ್ಲಿ ಹಾಡಿದರು.

ಪೇಯ್ ಆಳ್ವಾರವರು “ತಿರುಕ್ಕಂಡೇನ್” -ಶ್ರೀ ಮಹಾಲಕ್ಷ್ಮಿಯನ್ನು ಕಂಡೆ.. ಚಿನ್ನದಂತೆ ಹೊಳೆಯುವ ಈ ಸ್ವಾಮಿಯನ್ನು ಕಂಡೆ !!... ಎಂದು ನೂರು ಪಾಶುರಗಳಲ್ಲಿ ಆ ಸ್ವಾಮಿಯನ್ನೂ ಅವನ ಲೀಲೆಗಳನ್ನೂ ಅತ್ಯಂತ ಸುಂದರವಾಗಿ ಹಾಡಿದ್ದಾರೆ.

ಇಂತಹ ಭಗವಂತನೊಡನೆ ನರ್ತಿಸಿ ಅವನನ್ನು ಹಾಡಿ ಎಲ್ಲರಿಗೂ ಒಳ್ಳೆಯ ಜ್ಞಾನವನ್ನು ನೀಡಿರುವ ಶ್ರೀ ಪೇಯ್ಆಳ್ವಾರವರ ಪಾದಾರ ವಿಂದಗಳಿಗೆ ನಾವೆಲ್ಲರೂ ಭಕ್ತಿಯಿಂದ ನಮಿಸೋಣ.



# ಶ್ರೀ ವ್ಯಾಸರಾಜರು

-ಶ್ರೀಮತಿ ಸುಧಾಮಧುಸೂದನ್

ವ್ಯಾಸರಾಜರು ವೈದಿಕ ಮತ್ತು ದಾಸಪರಂಪರೆಯಲ್ಲೂ ಶ್ರೀಪಾದರಾಜರ ಶಿಷ್ಯರು. ಪುರಂದರದಾಸರು ಮತ್ತು ವಿಜಯದಾಸರು ಇವರ ಚರಿತ್ರೆಯನ್ನು ಪದ್ಯ ಮತ್ತು ಸುಳಾದಿಗಳಲ್ಲಿ ರಚಿಸಿದ್ದಾರೆ. ಸೋಮನಾಥನೆಂಬ ಕವಿಯು ಇವರ ಚರಿತ್ರೆಯನ್ನು ಸಂಸ್ಕೃತದಲ್ಲಿ 'ವ್ಯಾಸಯೋಗಿ ಚರಿತೆ' ಎಂಬ ಹೆಸರಿನ ಕಾವ್ಯವಾಗಿ ರಚಿಸಿದ್ದಾನೆ. ಹರಿಭಕ್ತ ಪ್ರಹ್ಲಾದನು ತ್ರೇತಾಯುಗದಲ್ಲಿ ವಾನರ ಸೈನ್ಯದಲ್ಲಿ ಕಪಿಯಾಗಿ ಹುಟ್ಟಿ ರಾಮ ಸೇವೆ ಮಾಡಿದನು.

ದ್ವಾಪರಯುಗದಲ್ಲಿ ಬಾಹ್ಲೀಕರಾಗಿ ಹುಟ್ಟಿ ಕೌರವರ ಕಡೆ ಇದ್ದು ಮಹಾಭಾರತ ಯುದ್ಧದಲ್ಲಿ ವಾಯುದೇವರ ಅಂಶಭೂತರಾದ ಹರಿಭೀಮ ಸೇನ ದೇವರನ್ನು ಕೇಳಿಕೊಂಡು ಅವರಿಂದಲೇ ಹತನಾದನೆಂದು ಆಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೇಳಿರುವರು. ಸಾಯುವಾಗ ಬಾಹ್ಲೀಕ ರಾಜನು 'ಕಲಿಯುಗದಲ್ಲಿ ಮತ್ತೆ ಹುಟ್ಟಿ ಹರಿಸೇವೆ ಮಾಡುವಂತೆ' ಅನುಗ್ರಹಿಸಬೇಕೆಂದು ಭೀಮಸೇನದೇವರನ್ನು ಕೇಳಿ ಕೊಂಡನೆಂದೂ, ಪ್ರಹ್ಲಾದ ರಾಜನ ರೂಪದಲ್ಲೇ ಹರಿವರ್ಷಖಂಡದಲ್ಲಿ ನರ ಸಿಂಹದೇವರ ಪೂಜೆ ಮಾಡುವಾಗ, ನಾರದರನ್ನು ಕಂಡು ಕಲಿಯುಗದಲ್ಲಿ ಹುಟ್ಟಿ ಕೃಷ್ಣಾರಾಧನೆ ಮಾಡ ಬಯಸಿದನೆಂದೂ, ಆದ್ದರಿಂದಲೇ ಕಲಿಯುಗದಲ್ಲಿ ವ್ಯಾಸರಾಜರಾಗಿಯೂ ರಾಘವೇಂದ್ರ ಸ್ವಾಮಿಗಳಾಗಿಯೂ, ಅವತರಿಸಿದನೆಂದೂ, ಶಂಕುಕರ್ಣನೆಂಬ ದೇವತೆಯೇ ಪ್ರಹ್ಲಾದರಾಜನ ಪೂರ್ವರೂಪವೆಂದೂ ಪುರಂದರ-ವಿಜಯ ದಾಸರುಗಳು ಅಭಿಪ್ರಾಯಪಟ್ಟಿದ್ದಾರೆ. ವ್ಯಾಸರಾಜರಿಗೆ ಆಶ್ರಮ ಗುರುಗಳಾದ ಬ್ರಹ್ಮಣ್ಯ ತೀರ್ಥರು ಬದರಿಯಲ್ಲಿ ನಾರಾಯಣ ದೇವರಿಂದ ಪುತ್ರವರವನ್ನು ಪಡೆದರು. ಆ ಪ್ರಕಾರವೇ ಮೈಸೂರು ದೇಶ ಬನ್ನೂರೆಂಬ ಗ್ರಾಮದಲ್ಲಿ ವೃದ್ಧ ದಂಪತಿಗಳಲ್ಲಿ ಮಕ್ಕಳಾಗುವಂತೆ ಅನುಗ್ರಹಿಸಿ,ಅವರಲ್ಲಿ ಹುಟ್ಟಿದ ಮಗುವನ್ನು ಪಡೆದು ತಾವೇ ಗೋಕ್ಷೀರದಿಂದ ಸಾಕಿ 'ಯತಿರಾಜ'ನೆಂದು ಹೆಸರಿಟ್ಟರು. ವ್ಯಾಸರಾಜರ ಜನ್ಮ ಕ್ರಿ.ಶ. 1441 ರಲ್ಲಿ ಆಗಿರಬಹುದೆಂದು ಇತಿಹಾಸ ಸಂಶೋಧಕರ ಅಭಿಪ್ರಾಯ.

ಯತಿರಾಜರಿಗೆ ಐದನೆಯ ವಯಸ್ಸಿನಲ್ಲೇ ಉಪನಯನವಾಯಿತು. ಇವರ ಅಲೌಕಿಕ ಪ್ರತಿಭೆ ಬಾಲ್ಯದಲ್ಲೇ ಪ್ರಕಾಶಕ್ಕೆ ಬಂದಿತು. ಮಧ್ವಮತದ ತತ್ವಗಳ ಸಂಗ್ರಹವನ್ನು ಒಂದೇ ಶ್ಲೋಕದಲ್ಲಿ ವ್ಯಾಸರಾಜರು ಬಾಲ್ಯದಲ್ಲೇ ಸಂಗ್ರಹಿಸಿದ್ದರೆಂಬ ಐತಿಹ್ಯವಿದೆ. ಇವರಿಗೆ ಏಳನೆಯ ವಯಸ್ಸಿನಲ್ಲಿಯೇ ಆಶ್ರಮವಾಯಿತು. ಕ್ರಿ.ಶ. 1467 ರ ವರೆಗೆ ಇವರು ಬ್ರಹ್ಮಣ್ಯ ತೀರ್ಥರಲ್ಲಿ ವ್ಯಾಸಂಗ ಮಾಡುತ್ತಿದ್ದು ಆ ಮೇಲೆ ಉತ್ತರದೇಶ ಸಂಚಾರ ಮಾಡಿ ಕಾಶಿ ಗದಾಧರ ಮಿಶ್ರ, ಪಕ್ಷಧರ ಮಿಶ್ರ ಮೊದಲಾದವರನ್ನು ಜಯಿಸಿದರು. ಆಚಾರ್ಯರ ಪರಂಪರೆಯಲ್ಲಿ ಟೀಕಾ ಕೃತ್ಪಾದರಾದ ಮೇಲೆ ಬಂದ ವಿದ್ಯಾಧಿರಾಜರಿಂದ ಎರಡು ಕವಲೊಡೆಯಿತು. ರಾಜೇಂದ್ರರ ಕವಲಿನಲ್ಲಿ ಅವರ ಶಿಷ್ಯರಾದ ಜಯಧ್ವಜತೀರ್ಥರು ಬಂಗಾಳ ಮತ್ತು ವೃಂದಾವನ ಪ್ರದೇಶದಲ್ಲಿ ವೈಷ್ಣವ ಮತ ಪ್ರಚಾರಮಾಡಿದವರಲ್ಲದೆ ಅಲ್ಲಿ ಲಕ್ಷ್ಮೀ ತೀರ್ಥರೆಂಬುವವರಿಗೆ ಆಶ್ರಮ ಕೊಟ್ಟರು. ಲಕ್ಷ್ಮೀತೀರ್ಥರ ಪರಂಪರೆಯಲ್ಲಿ ಬಂದವರೇ ಕೃಷ್ಣಚೈತನ್ಯರು. ವ್ಯಾಸರಾಜರು ಈ ವೈಷ್ಣವ ಪಂಥಕ್ಕೆ ವಿಶೇಷ ಪ್ರೋತ್ಸಾಹವಿತ್ತರು. ಆದ್ದರಿಂದ ಚೈತನ್ಯಮತಕ್ಕೆ ಮಧ್ವಮತವೇ ಮೂಲವೆನ್ನಬಹುದು. ವ್ಯಾಸರಾಜರಾದರೂ ಈ ರಾಜೇಂದ್ರರ ಪರಂಪರೆಯಲ್ಲಿ ಬಂದವರೇ. ಶ್ರೀಪಾದ ರಾಜರ ವಿದ್ಯಾಗುರುಗಳಾದ ವಿಬುಧೇಂದ್ರ ತೀರ್ಥರು ವಿದ್ಯಾಧಿರಾಜರ ಎರಡನೆಯ ಕವಲಾದ ಕವೀಂದ್ರರ ಪರಂಪರೆಗೆ ಸೇರಿದವರು. ವ್ಯಾಸರಾಜರು ಆಮೇಲೆ ಮುಳಬಾಗಿಲಿನಲ್ಲಿ ನೆಲೆಯಿದ್ದ ಶ್ರೀ ಪಾದರಾಜರಲ್ಲಿ ಬಹುಕಾಲ ಮಧ್ವಶಾಸ್ತ್ರವನ್ನು ಅಭ್ಯಾಸಮಾಡಿದರು. ಹಾಗೆಯೇ ಕನ್ನಡ ದಾಸಸಾಹಿತ್ಯ ಪರಂಪರೆಯನ್ನು ಇವರು ಶ್ರೀ ಪಾದರಾಜರಿಂದ ಬೆಳೆಸಿದರು. ಸಂಪುಟದಲ್ಲಿದ್ದ ಭಗವನ್ಮೂರ್ತಿ ಇವರ ಮುಂದೆ ನರ್ತನ ಮಾಡುತ್ತಾ ದರ್ಶನ ಕೊಟ್ಟಿದ್ದರಿಂದ ಇವರು "ಶ್ರೀ ಕೃಷ್ಣ" ಎಂಬ ದರ್ಶನ ಅಂಕಿತದಿಂದಲೇ ಕನ್ನಡದಲ್ಲಿ ಪದಗಳನ್ನು ರಚಿಸಿದರು. ಇವರ ಗುರುಗಳಾದ ಶ್ರೀ ಪಾದರಾಜರ ಆಜ್ಞೆಯ ಮೇರೆಗೆ ಕ್ರಿ.ಶ. 1476 ರ ಸುಮಾರಿಗೆ ಚಂದ್ರಗಿರಿಗೆ ಹೋಗಿ ಅಲ್ಲಿ ಸಾಳುವ ನರಸಿಂಹನಿಂದ ವಿಶೇಷವಾಗಿ ಸನ್ಮಾನಿತರಾದರು. 1486 ರಿಂದ 1498 ರ ವರೆಗೆ ತಿರುಪತಿ ವೆಂಕಟೇಶ ದೇವಸ್ಥಾನದ ಸರ್ವಾಧಿಪತ್ಯವನ್ನು ವಹಿಸಿಕೊಂಡು ದೇವರನ್ನು ಅರ್ಚಿಸಿದರು.

ಹರಿದಾಸರುಗಳಾದ ಪುರಂದರ, ಕನಕದಾಸರುಗಳು ಇವರ ಶಿಷ್ಯರು ಗಳು.ಕನ್ನಡ ಮಹಾಭಾರತ ಕರ್ತೃವಾದ ಗದುಗಿನ ನಾರಾಯಣಪ್ಪನು ತಾನು ರಚಿಸಿದ ಮಹಾಭಾರತವನ್ನು ಇವರಿಗೆ ತೋರಿಸಿ ಇವರ ಮೆಚ್ಚುಗೆಯನ್ನು ಪಡೆದ. ಪುರಂದರದಾಸರಂತೂ ಇವರಿಂದಲೇ ದಾಸದೀಕ್ಷೆ ಪಡೆದು 'ಪುರಂದರವಿಠಲ' ನೆಂಬ ಅಂಕಿತವನ್ನು ಹೊಂದಿ ಕನ್ನಡದಾಸಸಾಹಿತ್ಯದ ಆಚಾರ್ಯ ಪುರುಷ ರೆನಿಸಿದರು. ವ್ಯಾಸರಾಜರೇ ತಮಗೆ ಉದ್ಧಾರದ ದಾರಿ ತೋರಿ, ಭಗವತ್ತತ್ತ್ವ ಉಪದೇಶಮಾಡಿ, ಅಂಕಿತಕೊಟ್ಟರೆಂದು ಪುರಂದರದಾಸರೇ ಹೇಳಿಕೊಂಡಿದ್ದಾರೆ. ಇಂತಹ ಮಹೋನ್ನತ ವ್ಯಕ್ತಿತ್ವ ತೋರಿದ ವ್ಯಾಸರಾಜರನ್ನು ಅವರ ಗುರುಗಳೇ ಕೊಂಡಾಡಿದ್ದಾರೆ. ಇವರು 1539 ವಿಳಂಬಿ, ಫಾಲ್ಗುಣ ಕೃಷ್ಣಚತುರ್ದಶೀ ಪರಂ ಧಾಮ ವೈದಿದರು. ಈ ಅಂಶವು ಪುರಂದರದಾಸರಿಂದ ವರ್ಣಿತವಾಗಿದೆ.

ಚಿತ್ರಕಥೆ

# ಅಭಿಷೇಕಕ್ಕೆ ಆಕಾಶಗಂಗೆ

ಕಥೆ :
ತೆಲುಗು ಮೂಲ: ಡಿ. ಶ್ರೀನಿವಾಸ ದೀಕ್ಷಿತರು
ಅನುವಾದ : ಶ್ರೀಮತಿ. ಆರ್. ಕೃಷ್ಣವೇಣಿ
ಚಿತ್ರಗಳು : ಕೆ. ದ್ವಾರಕನಾಥ್


ಯಾಮುನಾಚಾರ್ಯರ ಆದೇಶಾನುಸಾರ ಭಕ್ತಿ ಶ್ರದ್ಧೆಗಳೊಂದಿಗೆ ಶ್ರೀ ವೆಂಕಟೇಶ್ವರನ ಅಭಿಷೇಕಕ್ಕೆ ನಿತ್ಯವೂ ದಿವ್ಯಜಲವನ್ನು ಪಾಪನಾಶನಂನಿಂದ ತರುತ್ತಿದ್ದನು ಶ್ರೀ ಶೈಲಪೂರ್ಣನು. ಒಂದು ದಿನ ಒಬ್ಬ ಬೇಟೆಗಾರನು ಆತನ ದಾರಿಯಲ್ಲಿ ಒಂದು.......










ಕೋಪದಿಂದ ಶ್ರೀ ಶೈಲಪೂರ್ಣನು ವೇಗವಾಗಿ ನಡೆಯುತ್ತಿರಲು ಆತನ ಹಿಂದೆಯೇ ನಡೆಯುತ್ತಾ ತಲೆ ಮೇಲಿರುವ ಮಡಿಕೆಗೆ ಬಾಣದಿಂದ ರಂಧ್ರವನ್ನು ಮಾಡಿ ಅದರಿಂದ ಬರುತ್ತಿರುವ ನೀರನ್ನು ಕುಡಿಯುತ್ತಿರುವ ಬೇಟೆಗಾರನನ್ನು ನೋಡಿ ಗದರಿಸಿದನು ಶ್ರೀ ಶೈಲ ಪೂರ್ಣನು.




ಓ .. ಉಪಾಯವಾ ಹೇಳು ಬೇಗ....
ಅದೋ.... ನೋಡು ಅಲ್ಲೊಂದು ದಿವ್ಯ ತೀರ್ಥವಿದೆ ನಡೆ... ತೋರಿಸುತ್ತೇನೆ.
ಹಾಗೆ ಆಗಲಿ ತೆಗೆದುಕೊಂಡು ಹೋಗುತ್ತೇನೆ! ಇಷ್ಟಕ್ಕೂ ನೀನ್ಯಾರು...
ಇಬ್ಬರು ಸೇರಿ ಆ ಪ್ರದೇಶಕ್ಕೆ ಹೋಗಿ ನೋಡಿದರು. ಅಲ್ಲಿ ತೀರ್ಥವಿಲ್ಲ. ತಕ್ಷಣವೇ ಬೇಟೆಗಾರನು ಬಾಣದಿಂದ ಬೆಟ್ಟಕ್ಕೆ ಹೊಡೆದು ರಂಧ್ರವನ್ನು ಮಾಡಿದನು ಅಲ್ಲಿಂದ ಸ್ವಚ್ಛವಾದ ಜಲಧಾರೆ ಬಂದಿತು....
ಸ್ವಾಮಿ! ಇದು ಆಕಾಶಗಂಗೆ..... ಈ ನೀರು ಅಮೃತವೇ ಎಂದು ತಿಳಿದು ದಿನಾ ಬಂದು ಈ ನೀರನ್ನು ಅಭಿಷೇಕಕ್ಕೆ ತೆಗೆದು ಕೋ
ಸ್ವಾಮಿ! ಏನು ಹಾಗೆ ನೋಡುತ್ತಿರುವೆ? ನನ್ನ ಮುಖದಲ್ಲಿ ಏನಾದರೂ ಗೊಂಬೆ ಕುಣಿಯುತ್ತಿದೆಯಾ?
ನೀನು ಬೇಟೆಗಾರನಾ.... ಇಲ್ಲ.... ನನ್ನ ಸ್ವಾಮಿನಾ?


ಸರಿಯಾಗಿ ನೋಡು ! ನಿಜವೇನೆಂದು ನಿನಗೆ ಗೊತ್ತಾಗುತ್ತದೆ !
ಆ ನಿಜ ಗೊತ್ತಾಯಿತು ನೀನು ಬೇಟೆಗಾರನಲ್ಲ ! ನೀನು ನನ್ನ ಸ್ವಾಮಿಯೇ!
೮
೯
ಅಲ್ಲಿಯವರೆಗೂ ನಗುತ್ತಾ ನಿಂತ ಬೇಟೆಗಾರನು ಕ್ಷಣದಲ್ಲಿ ಶ್ರೀ ವೆಂಕಟೇಶ್ವರನಾಗಿ ಬದಲಾಗಿ ಮಾಯವಾದನು. ಶ್ರೀ ಶೈಲ ಪೂರ್ಣನ ಕೈಯಲ್ಲಿ ಹೊಡೆದ ಮಡಿಕೆ ಹೋಗಿ ಹೊಸ ಮಡಿಕೆ ಬಂತು.
ಶ್ರೀನಿವಾಸಾ! ನಿನ್ನ ಲೀಲೆಗಳು ಅದ್ಭುತವಯ್ಯಾ.. ನನ್ನನ್ನು ಕರುಣಿಸಲು ಬಂದೆಯಾ?
ತಕ್ಷಣ ಹೊಸ ಮಡಿಕೆಯೊಳಗೆ ಆಕಾಶಗಂಗಾ ಜಲವನ್ನು ತುಂಬಿಸಿಕೊಂಡು ಆನಂದ ನಿಲಯಕ್ಕೆ ಸೇರಿಕೊಂಡನು ಶ್ರೀ ಶೈಲಪೂರ್ಣನು.
10
ಇಂದಿನಿಂದ ಆಕಾಶಗಂಗಾ ಜಲವನ್ನು ನನ್ನ ಅಭಿಷೇಕಕ್ಕೆ ಉಪಯೋಗಿಸಿಕೊಳ್ಳಿ!
ಗೋವಿಂದಾ! ಗೋವಿಂದಾ!




ಕಾಲಕ್ರಮದಲ್ಲಿ ಶ್ರೀ ಶೈಲಪೂರ್ಣನು ತಿರುಮಲನಂಬಿಯಾಗಿ ಪ್ರಸಿದ್ಧನಾದನು. ಇವರು ಶ್ರೀ ರಾಮಾನುಜಾಚಾರ್ಯರಿಗೆ ಸೋದರ ಮಾವ. ಇಂದಿಗೂ ಈ ಭಾಗವತೋತ್ತಮನನ್ನು ನೆನೆಯುತ್ತಾ ತಿರುಮಲೆಯಲ್ಲಿ ಅಧ್ಯಯನೋತ್ಸವದ ಕೊನೆಯ ದಿನದ ಸಂದರ್ಭವಾಗಿ "ತನ್ನೀರಮ್ಯದ ಉತ್ಸವ" ವನ್ನು ನಡೆಸುವುದು ಸಂಪ್ರದಾಯವಾಗಿದೆ.

ಮುಂದಿನ ಸಂಚಿಕೆಯಲ್ಲಿ ..... ಸ್ವಾಮಿಯವರ ಪುಷ್ಕರಿಣಿಯಲ್ಲಿ ಸ್ನಾನ ಮಾಡಿದ ನಂತರ ಧರ್ಮಗುಪ್ತನಿಗೆ ಹೇಗೆ ಹುಚ್ಚು ಕಡಿಮೆಯಾಯಿತು ಎಂಬುದರ ಬಗ್ಗೆ ತಿಳಿದು ಕೊಳ್ಳೋಣ!

ಸ್ವಸ್ತಿ.

# ಕೋಪ ಮತ್ತು ತಾಳ್ಮೆ ಅಥವಾ ಸಹನೆ

- ಬಿ. ಆರ್. ಶ್ರೀಕಂಠಯ್ಯ

ನಮ್ಮೆಲ್ಲರ ಮನಸ್ಸಿನ ವಿಕಾರಗಳಿಗೆ ಕೋಪ ಮತ್ತು ತಾಳ್ಮೆಯೇ ಕಾರಣ. ಕೋಪದಿಂದ ಮನಸ್ಸಿನ ಸ್ಥಿಮಿತ ಕೆಡುತ್ತದೆ. ಕೋಪದಲ್ಲಿ ನಾವು ಏನು ಮಾತಾಡಿದೆವು ಮತ್ತು ಮಾಡಿದೆವು ಎಂಬ ಪರಿಜ್ಞಾನ ನಮಗಿರುವುದಿಲ್ಲ. ಕೋಪದಲ್ಲಿದ್ದಾಗ ಆಡಿದ ಮಾತು ನಾವು ಮಾಡಿದ ಕಾರ್ಯ ತಾಳ್ಮೆಯಿದ್ದಾಗ ನಮ್ಮ ಮನಸ್ಸಿಗೆ ಬರುವುದಿಲ್ಲ. ಇದು ಮಕ್ಕಳಿಂದ - ಹಿರಿಯರವರೆಗೂ, ವಿದ್ಯಾರ್ಥಿಗಳಿಂದ - ಶಿಕ್ಷಕರವರೆಗೂ, ಎಲ್ಲರಿಗೂ ಮತ್ತು ಎಲ್ಲ ರಂಗದವರಿಗೂ ಅನ್ವಯಿಸುತ್ತದೆ. ಕೋಪದಲ್ಲಿ ಆಡುವ ಮಾತು ಕ್ರೂರವಾಗಿರುತ್ತದೆ ಮತ್ತು ಮಾತಾಡುವಾಗ ನಮ್ಮ ದೇಹದಲ್ಲಿ ಕಂಪನವಿರುತ್ತದೆ. ಕೋಪದಲ್ಲಿ ಆದ "ಅನಾಹುತ" ಮತ್ತೆ ಸರಿಪಡಿಸಲಾಗುವುದಿಲ್ಲ. ದಿನನಿತ್ಯ ನಾವು ಎಷ್ಟೋ ಅನಾಹುತದ ನಿದರ್ಶನಗಳನ್ನು ನೋಡುತ್ತಿರುತ್ತೇವೆ.

ಎಲ್ಲ ಮಕ್ಕಳು ರಾಮಾಯಣದ ಕಥೆಯನ್ನು ಕೇಳಿದ್ದಾರೆ. ಅಯೋಧ್ಯ ಕಾಂಡದಲ್ಲಿ - ಸೋದರ ಮಾವನಮನೆಯಿಂದ ಭರತನು ಅಯೋಧ್ಯೆಗೆ ಬಂದಾಗ, ಅಣ್ಣ ಶ್ರೀ ರಾಮಚಂದ್ರನು ವನವಾಸಕ್ಕೆ ಹೋದ ವಿಷಯ ತಿಳಿದು, ಬೇಸರಗೊಂಡ ಭರತನು, ಶ್ರೀ ರಾಮನನ್ನು ರಾಜಮರ್ಯಾದೆಯಿಂದ ಅಯೋಧ್ಯೆಗೆ ಕರೆತರಬೇಕೆಂದು ದಂಡ ಕಾರಣ್ಯಕ್ಕೆ ಬರುತ್ತಿರುತ್ತಾನೆ. ಈ ರೀತಿ ಬರುವಾಗ ಆನೆ, ಕುದುರೆ (ಅಶ್ವದಳ) ಮತ್ತು ವಿವಿಧ ರೀತಿಯ ಸೈನ್ಯಗಳ ರಭಸಕ್ಕೆ "ವನ್ಯಮೃಗಗಳು" ಭಯ ಗೊಂಡು ಓಡುತ್ತಿರುತ್ತದೆ. ಇದರ ಕಾರಣ ತಿಳಿಯದ, ಶ್ರೀ ರಾಮಚಂದ್ರನು ದೃಶ್ಯವನ್ನು ನೋಡಿ,ಕಾರಣವನ್ನು ತಿಳಿಯಲು ಲಕ್ಷ್ಮಣನಿಗೆ ಹೇಳುತ್ತಾನೆ. ಅಣ್ಣನ ಮಾತಿಗೆ, ಲಕ್ಷ್ಮಣನು ಮರವನ್ನು ಹತ್ತಿ ನೋಡಲು, ತಮ್ಮನಾದ ಭರತನು ಅಪಾರ ಸೈನ್ಯದೊಂದಿಗೆ ಬರುವುದನ್ನು ವೀಕ್ಷಿಸಿ, ಭರತನು ತಮಗೆ ಕೇಡನ್ನು ಬಯಸಿಯೇ ಬಂದಿರುವನೆಂದು ಭಾವಿಸಿ "ಕೋಪ ದಿಂದ" ಮನಸ್ಸಿನ ಸ್ಥಿಮಿತವನ್ನು ಕಳೆದುಕೊಂಡು , ಬುಸುಗುಟ್ಟುತ್ತಾ, ಯಜ್ಞ ಕಾರ್ಯದಲ್ಲಿ ನಿರತನಾದ ಶ್ರೀ ರಾಮನಿಗೆ ಹೇಳುತ್ತಾನೆ. "ಅಣ್ಣಾ" ಯಜ್ಞೇಶ್ವರನ್ನು ಬೇಗ ಆರಿಸಿಬಿಡು,ಸೀತಾ ಮಾತೆಯು ಗುಹೆಯ ಬಳಿಗೆ ಹೊರಟುಹೋಗಲಿ, ನೀನು ಧನುರ್ಬಾಣಗಳನ್ನು ಧರಿಸಿ ಧನಸ್ಸಿಗೆ

ಹೆದೆಯೇರಿಸಿ ಸಿದ್ಧನಾಗು ಎಂದು ಹೇಳುತ್ತಾನೆ. ತಮ್ಮನಾದ ಲಕ್ಷ್ಮಣನು ಮನಸ್ಸಿನ ಸ್ಥಿಮಿತ ಕಳೆದುಕೊಂಡು ಕೋಪದಿಂದ ಹೇಳಿದ ಮಾತಿಗೆ, "ಲಕ್ಷ್ಮಣ" ಯೋಗ್ಯಸಮಯದಲ್ಲಿ ಮಾತ್ರವೇ ಧನಸ್ಸನ್ನು ಹಿಡಿಯುವ, ಮಹಾಪ್ರಾಜ್ಞನಾದ ಭರತನು ತಾನಾಗಿಯೇ ಇಲ್ಲಿಗೆ ಬಂದಿರುವಾಗ, ಧನುಸ್ಸಿಗಾಗಲಿ - ಗುರಾಣಿಯಿಂದ ಕೂಡಿದ ಕತ್ತಿಗಾಗಲಿ ಇಲ್ಲಿ ಯಾವ ಕೆಲಸವಿದೆ? ಎಂದು ಅಷ್ಟೇ "ತಾಳ್ಮೆ" ಯಿಂದ, ಲಕ್ಷ್ಮಣನಿಗೆ ಹೇಳುತ್ತಾನೆ. ಇಲ್ಲಿ ಶ್ರೀರಾಮನ "ತಾಳ್ಮೆ", ಲಕ್ಷ್ಮಣನ "ಕೋಪ" ದಿಂದ ಆಗುವ ಅನಾಹುತ ನಿಂತು ಹೋಯಿತು.

ಇದೇರೀತಿ, ನಾವು ಇಂತಹ ನಿದರ್ಶನಗಳನ್ನು ನಾವು ಎಲ್ಲ ಕಡೆಯಲ್ಲಿ ಕಾಣಬಹುದು. ರಾಮಾಯಣ ಅಥವಾ ಇತರ ಗ್ರಂಥಗಳಲ್ಲಿ ಬರುವ ನಿದರ್ಶನಗಳು ನಮಗೆ ಮಾರ್ಗದರ್ಶನ ಮತ್ತು ಪಾಠ ಕಲಿಸುವ ಸಾಧನ ಮಾತ್ರ. ನಾವು ನಮ್ಮ ದಿನ ನಿತ್ಯದಲ್ಲೂ ಸಹ ಕೋಪದಿಂದ ಸ್ನೇಹಿತರ ಜೊತೆ ಆಡುವ ಮಾತುಗಳು, ವಿದ್ಯಾರ್ಥಿ ಜೀವನದಲ್ಲಿ ಮಾಡುವ ಕಾರ್ಯಗಳು ಘೋರವಾದ ಪರಿಣಾಮ ಬೀರುತ್ತದೆ. "ಹೋಮ್ ವರ್ಕ್" ಮಾಡುವಾಗ ತಾಯಿಯ ಮೇಲೆ ಕೋಪ, ಉಪಾಧ್ಯಾಯರು ಒಳ್ಳೆಯ ಮಾತು ಹೇಳಿ ಪಾಠ ಕಲಿಸುವಾಗ ಅವರ ಮೇಲೆ ಕೋಪ ಮತ್ತು ಎಲ್ಲ ರೀತಿಯ ಮತ್ತು ಎಲ್ಲರ ಕೋಪಗಳು ಬಹಳ ಕೆಟ್ಟ ಪರಿಣಾಮ ಆಗಿರುವುದನ್ನು ನಾವು ಕಾಣಬಹುದು. ಆದ್ದರಿಂದ, ನಮ್ಮ ವಿದ್ಯಾರ್ಥಿ ಜೀವನದಿಂದಲೇ ಆದಷ್ಟು "ಕೋಪ" ವನ್ನು ಕಡಿಮೆಮಾಡಿ "ತಾಳ್ಮೆ" ಯಿಂದ ಇದ್ದರೆ, ಎಲ್ಲವೂ ಸುಗಮವಾಗಿರುತ್ತದೆ ಮತ್ತು ನಮ್ಮ ಜ್ಞಾಪಕ ಶಕ್ತಿ ಜಾಸ್ತಿಯಾಗಿ, ನಾವು ನಮ್ಮ ಪಾಠ ಮತ್ತು ಇತರ ಎಲ್ಲ ರೀತಿಯ ಕಲಿಕೆಯ ಕಾರ್ಯಗಳಲ್ಲಿ ಯಶಸ್ವಿಯಾಗಿ ಉತ್ತಮ ಪ್ರಜೆಯಾಗಲು ಸಹಕಾರಿಯಾಗುತ್ತದೆ. ಒಂದು ವೇಳೆ ಕೋಪ ಇದ್ದರೆ, ಕೋಪ ಮಾಡಿಕೊಳ್ಳದಿರಲು ಬೇಕಾದಷ್ಟು ಉಪಯುಕ್ತವಾದ ಸಾಧನೆಗಳಿವೆ, ಅದನ್ನು ಅನುಸರಿಸುವುದರಿಂದ ನಮ್ಮಲ್ಲಿ ತಾಳ್ಮೆ ಬರುತ್ತದೆ.

ಕೋಪದಿಂದ ಆದ ಪರಿಣಾಮದ ಬಗ್ಗೆ, ನಮ್ಮಲ್ಲಿ ವೇದಕ್ಕೆ ಸಮಾನವಾದ ಅನೇಕ ಅನುಭವದ ಗಾದೆಗಳು ಇವೆ -

"ಕಡು ಕೋಪ ಬಂದಾಗ ತಡೆದುಕೊಂಡವನೇ ಜಾಣ"

"ಕೋಪದಲ್ಲಿ ಕೊಯ್ದ ಮೂಗು ಶಾಂತಿಯಲ್ಲಿ ಬಂದೀತೆ"?

"ತಾಳಿದವ ಬಾಳಿಯಾನು ತೂಗಿದವ ನೀಗಿಯಾನು"



# ಪ್ರಜ್ಞಾವಂತ ಬಾಲಕ

**ಹೆಸರು :** ಇ. ಚಕ್ರಧರ್

**ತರಗತಿ : -** 2 ನೇ ತರಗತಿ

**ಹುಟ್ಟಿದ ದಿನಾಂಕ :** 26-11-2012

**ತಂದೆಯ ಹೆಸರು :** ಇ. ವೆಂಕಟರಮೇಶ್, ಸೀನಿಯರ್ ಜೆ.ಸಿ.ಓ., ಇಂಡಿಯನ್ ಆರ್ಮಿ

**ತಾಯಿಯ ಹೆಸರು :** ಶ್ರೀಮತಿ. ಡಿ. ಶ್ರೀದೇವಿ. ಸಿನಿಯರ್ ಆಫ್‌ಸೆಟ್ ಪ್ರಿಂಟರ್, ತಿ.ತಿ.ದೇ. ಮುದ್ರಣಾಲಯ,ತಿರುಪತಿ

**ಎಲ್.ಕೆ.ಜಿ. ಯಲ್ಲಿ:**

22-4-2017 - 210ನಾಮವಾಚಕಗಳನ್ನು 78 ಸೆಕೆಂಡ್‌ಗಳಲ್ಲಿ ಒಂದೇ ಸಮನೇ ಉಚ್ಚರಿಸುವುದರಲ್ಲಿ ಜೀನಿಯಸ್ ಬುಕ್ ಆಫ್ ರಿಕಾರ್ಡ್ಸ್, ವಂಡರ್ ಬುಕ್ ಆಫ್ ರಿಕಾರ್ಡ್ಸ್‌ನ್ನು ಸಾಧಿಸಿದ್ದಾನೆ.

5-06-2017 - 100 ವೇಮನ ಪದ್ಯಗಳನ್ನು 200 ಮಂದಿ ವಿದ್ಯಾರ್ಥಿಗಳೊಂದಿಗೆ ಒಂದೇ ಸಮನೇ ಉಚ್ಚರಿಸುವುದರಲ್ಲಿ ಜೀನಿಯಸ್ ಬುಕ್ ಆಫ್ ರಿಕಾರ್ಡ್ಸ್, ವಂಡರ್ ಬುಕ್ ಆಫ್ ರಿಕಾರ್ಡ್ಸ್‌ನ್ನು ಸಾಧಿಸಿದ್ದಾನೆ.

**ಯು.ಕೆ.ಜಿ. ಯಲ್ಲಿ:**

3-06-2018 - 100 ವೇಮನ ಪದ್ಯಗಳನ್ನು 300 ಮಂದಿ ವಿದ್ಯಾರ್ಥಿಗಳೊಂದಿಗೆ ಒಂದೇ ಸಮನೇ ಉಚ್ಚರಿಸುವುದರಲ್ಲಿ ಜೀನಿಯಸ್ ಬುಕ್ ಆಫ್ ರಿಕಾರ್ಡ್ಸ್, ವಂಡರ್ ಬುಕ್ ಆಫ್ ರಿಕಾರ್ಡ್ಸ್‌ನ್ನು ಸಾಧಿಸಿದ್ದಾನೆ.

ವೇವನ ಶತಕರತ್ನ ಪುರಸ್ಕಾರ

ಗೀತಬಾಲ ಪುರಸ್ಕಾರ - (12,15 ಅಧ್ಯಾಯಗಳು)

1 ನೇ ತರಗತಿ - ಕ್ಷಣಿಕ ಗಣಿತ ಪುರಸ್ಕಾರ - 20 ಮಗ್ಗಿಗಳನ್ನು ಒಂದೇ ಸಮನೇ ಉಚ್ಚರಿಸುತ್ತಾನೆ.

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

1) ಪಾಂಡವರು ಎಷ್ಟು ವರ್ಷಗಳ ಕಾಲ ವನವಾಸ ಮಾಡಿದರು?

ಅ) 12 ಆ) 11

ಇ) 13 ಈ) 1

2) ಪಾಂಡವರು ಎಷ್ಟು ವರ್ಷ ಅಜ್ಞಾತವಾಸ ಮಾಡಿದರು?

ಅ) 2 ಆ) 4

ಇ) 1 ಈ) 5

3) ಕೈಕೇಯಿಯು ಕೇಳಿದ ವರದ ಪ್ರಕಾರ ಶ್ರೀ ರಾಮನು ಎಷ್ಟು ವರ್ಷ ವನವಾಸ ಮಾಡಿದನು?

ಅ) 10 ಆ) 12

ಇ) 14 ಈ) 15

4) ರಾವಣನ ತಂಗಿಯ ಹೆಸರೇನು?

ಅ) ತ್ರಿಜತೆ ಆ) ಲಂಕಿಣಿ

ಇ) ಸಿಂಹಿಣಿ ಈ) ಶೂರ್ಪಣಖಿ

5) ರಾವಣನ ಸಾತ್ವಿಕ ಹಾಗೂ ದೈವಭಕ್ತ ತಮ್ಮ ಯಾರು?

ಅ) ಕುಂಭಕರ್ಣ ಆ) ಮರೀಚ

ಇ) ವಿಭೀಷಣ ಈ) ಇಂದ್ರಜಿತ್ತು

6) ಲಕ್ಷ್ಮಣ ಮತ್ತು ಶತ್ರುಘ್ನ ತಾಯಿ ಯಾರು?

ಅ) ಕೌಸಲ್ಯ ಆ) ಕೈಕೇಯಿ

ಇ) ಸುಮಿತ್ರ ಈ) ಊರ್ಮಿಳ

7) ದಶರಥನ ಮೊದಲನೆಯ ರಾಣಿ ಯಾರು?

ಅ) ಕೌಸಲ್ಯೆ ಆ) ಸುಮಿತ್ರ

ಇ) ಕೈಕೇಯಿ ಈ) ಮಂಡೋದರಿ


• • • • • • • • • • • •

ಉತ್ತರಗಳು:

1) ಇ 2) ಇ 3) ಇ 4) ಈ 5) ಇ 6) ಇ 7) ಅ

# ಚಿತ್ರಲೇಖನ

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**



**ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



ತಿರುಮಲೆಯಲ್ಲಿ ... ವೇದಪಾರಾಯಣ ಮಾಡುತ್ತಿರುವ ವೇದವಿದ್ಯಾರ್ಥಿ ಬೃಂದ

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams printing on 25-05-2020. Regd. with the Registrar of Newspapers under "RNI" No.10742.
Postal Regd.No.TRP/14- 2018-2020, Licensed to post without prepayment
No.PMGK/RNP/WPP-04/2018-2020



ಸೀತಾಶೋಕ ನಿವಾರಕ ಹನುಮಂತ